**<u>ದಿನಾಂಕಃ 16.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಮುಂದುವರೆದ ಪಾಟೀ ಸವಾಲು 1 ನೇ  ಪ್ರತಿವಾದಿ ಪರ ಶ್ರೀ ಸಿ.ಆರ್.ಎಸ್. ವಕೀಲರಿಂದಃ</u>**

**11.** ವಾದಿ ಮತ್ತು ಪ್ರತಿವಾದಿಯರ  ಎಷ್ಟು ತಲೆಮಾರು ವಂಶಸ್ಥರು ಎಂದು ಹೇಳಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ವಂಶಾವಳಿ ಯಾರು ಬರೆಯಿಸಿರುತ್ತಾರೆ ಎಂದು  ನನಗೆ ಗೊತ್ತಿಲ್ಲ.  ವಾದಿ ತನ್ನ ಜಮೀನಕ್ಕೆ ಹೋಗಲು ಯಾವ ಸರ್ವೇ ನಂಬರನಲ್ಲಿ ರಸ್ತೆ ಬೇಕು ಎಂದು ದಾವೆಯಲ್ಲಿ ನಮೂದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.  ನನ್ನ ಪ್ರಮಾಣ ಪತ್ರದಲ್ಲಿ  ಸರ್ವೇ ನಂಬರ ಬರೆಯಿಸಿದರ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರ ಜಮೀನು ನೀರಾವರಿ ಜಮೀನು ಎಂದರೆ ಸರಿ. ನೀರಾವರಿ ಜಮೀಣು ಇದ್ದರೆ ತಮ್ಮ ಜಮೀನು ಎಷ್ಟು ಇರುತ್ತದೋ ಅಷ್ಟು ಜಮೀನಿನಲ್ಲಿ ಉಳಿಮೆ ಮಾಡುತ್ತಾರೆ ಎಂದರೆ ಸಾಕ್ಷಿಯು ರಸ್ತೆಗೆ ಜಾಗ ಬಿಟ್ಟಿದ್ದರೆ ರಸ್ತೆ ಬಿಟ್ಟು ಉಳಿಮೆ ಮಾಡುತ್ತಾರೆ ಎಂದು ನುಡಿಯುತ್ತಾರೆ.

12. ಪ್ರತಿವಾದಿಯು ತನ್ನ ಜಮೀನಿನಲ್ಲಿ ತನ್ನ ಗಡಿಯವರೆಗೂ ಉಳಿಮೆ ಮಾಡಿ ಹೊಂಡವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ರಸ್ತೆಗೆ ಬಿಟ್ಟ ಜಾಗ ಮತ್ತು ಹೊಂಡಕ್ಕೆ ಬಿಟ್ಟ ಜಾಗವನ್ನು ಹೊರತುಪಡಿಸಿ ಉಳುಮೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ತನ್ನ ದಾವೆಯಲ್ಲಿ ತಾನು ಹಾಯ್ದು ಬರುವ ರಸ್ತೆಯಲ್ಲಿ ಪ್ರತಿವಾದಿಯು ನೀರಿನ ಟಾಕೆಯನ್ನು ಮಾಡಿರುತ್ತಾರೆ ಎಂದು ದಾವೆಯಲ್ಲಿ ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ರಸ್ತೆಯನ್ನು ಹೊರತುಪಡಿಸಿ ನೀರಿನ ಟಾಕೆ ಇರುತ್ತದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

13. ವಾದಿಯು ಹಾಜರುಪಡಿಸಿದ ಹಾತ ನಕಾಶೆಯನ್ನು ನಾನು ನೋಡಿರುವುದಿಲ್ಲ.  ನನ್ನ ಪ್ರಮಾಣ ಪತ್ರದಲ್ಲಿ ಹಾತ ನಕಾಶೆ ಬಗ್ಗೆ ಯಾರು ಬರೆಯಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಐದು ಮಳ ಎಂದರೆ ಎಷ್ಟು ಫೂಟ ಎಂದು ನನಗೆ ಗೊತ್ತಿಲ್ಲ.  ನನ್ನ ಪ್ರಮಾಣ ಪತ್ರದಲ್ಲಿ ಸದರಿ

ವಿಷಯ ಬರೆಯಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಒಪ್ಪಿಗೆ ಪತ್ರ ಎಂದರೆ ಬಾಂಡ್. ಬಾಂಡಿನಲ್ಲಿ ಬರೆದ ವಿಷಯ ಯಾವ ಪತ್ರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿ ಹಾಜರುಪಡಿಸಿದ ಬಾಂಡ್ ಒಪ್ಪಿಗೆ ಪತ್ರ ಆಗಿರುತ್ತದೆ ಎಂದು ನಾನೇ ಹೇಳಿರುತ್ತೇನೆ. ಅದರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತದೆ. ಬಾಂಡನಲ್ಲಿ ಸರ್ವೆ ನಂಬರ ಬರೆದ ಬಗ್ಗೆ ನನಗೆ ನೆನಪಿಲ್ಲ. ಎಷ್ಟು ಸರ್ವೆ ನಂಬರ ನಮೂದಿಸಿರುತ್ತಾರೆ ಎಂದು ನೆನಪಿಲ್ಲ. ಬಾಂಡನಲ್ಲಿ ಎನು ಬರೆಯಲಾಗಿದೆ ಎಂದರೆ ನನಗೆ ಗೊತ್ತಿರುತ್ತದೆ. ಬಾಂಡನಲ್ಲಿ ದಾರಿ ವಿಷಯವಾಗಿ ನಮೂದಿಸಿರುತ್ತಾರೆ. ಯಾವ ಜಮೀನನಿಂದ ಯಾವ ಜಮೀನಿಗೆ ಜಮೀನಿಗೆ ಹೋಗಬೇಕಾಗುತ್ತದೆ ಎಂದು ನಮೂದಿಸಿದ ಬಗ್ಗೆ ನನಗೆ ಗೊತ್ತಿಲ್ಲ.

14. ಯಾವ ದಿನಾಂಕ, ಯಾವ ವರ್ಷ, ಯಾವ ತಿಂಗಳು ದಾಖಲಾತಿಗಳನ್ನು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಮಾಯಪ್ಪ ಮತ್ತು ತಿಪ್ಪಣ್ಣ ಮಾಹಿತಿ ನೀಡಿರುತ್ತಾರೆ. ಶರಣಯ್ಯ ಸ್ವಾಮಿ ಎಂಬುವವರು ಬರೆದಿರುತ್ತಾರೆ. ಎಷ್ಟು ರೂಪಾಯಿ ಬಾಂಡ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬಾಂಡನ್ನು ಯಾರು ತೆಗೆದುಕೊಂಡು ಬಂದರು ಎಂದರೆ ನನಗೆ ಗೊತ್ತಿಲ್ಲ. ಮಾಯಪ್ಪನ ಸಮ್ಮತ್ತಿ ಇಲ್ಲದೇ ತಯಾರಿಸಿದ ಬಾಂಡ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಬಾಂಡನ್ನು ತಯಾರಿಸಿದ ಎಷ್ಟು ವರ್ಷಗಳ ನಂತರ ದಾವಾ ಸಲ್ಲಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬಾಂಡಿಗೂ ಪ್ರತಿವಾದಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮಾಯಪ್ಪ ಜಮೀನಿನ ಆದಾಯದ ಮೇರೆಗೆ ಜೀವನ ಸಾಗಿಸುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ತನ್ನ ಜಮೀನನಲ್ಲಿ ಉಳಿಮೆ ಮಾಡುತ್ತಾನೆ ಎಂದರೆ ಸರಿ.

15. ಪ್ರತಿವಾದಿಯ ಜಮೀನನಲ್ಲಿ ಕಾನೂನು ಬಾಹಿರವಾಗಿ ರಸ್ತೆ ಮಾಡುವದರಿಂದ 6-7 ಫೂಟನಷ್ಟು ಜಮೀನು ನಷ್ಟ ವಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿ ಎಕರೆಗೆ 15-20 ಲಕ್ಷ ಇರುತ್ತದೆ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

(ಶ್ರೀ ಅಮಿತ್ ಘಟ್ಟಿ)
ದಿವಾಣಿ ನ್ಯಾಯಾಧೀಶರು ಮತ್ತು
ನ್ಯಾಯಿಕ ದಂಡಾಧಿಕಾರಿಗಳು
ಬಸವನ ಬಾಗೇವಾಡಿ.